ಕೃಷಿ, ರಾಜಕೀಯ, ಸಮಾಜ, ಸಾಹಿತ್ಯ – ತೊಡಗಿಕೊಂಡ ಎಲ್ಲದರಲ್ಲೂ ಮಾನವೀಯ ಸಂವೇದನೆಗಳ ಹುಡುಕಾಟದಲ್ಲಿ ನಿರತರಾಗಿರುವ ಸುರೇಶ ಕಂಜರ್ಪಣೆ ಸದ್ಯಕ್ಕೆ ಮೈಸೂರು ನಿವಾಸಿ. ಕವಿ, ಕಥೆಗಾರ ಹಾಗೂ ಅನುವಾದಕ. 'ದಡ ಬಿಟ್ಟ ದೋಣಿ', 'ಕಂಡಷ್ಟು ಕಡೆದಷ್ಟು', 'ಅಗೇಡಿ', 'ಅಕ್ಷರವೃಕ್ಷ ಎ. ನಾರಾಯಣ ರೆಡ್ಡಿ' ಅವರ ಕೆಲವು ಪ್ರಸಿದ್ಧ ಕೃತಿಗಳು. 'ಕೊಸಿಮೊ' (ಇಟಾಲೊ ಕಾಲ್ವಿನೊ) ಹಾಗೂ 'ಬೆಂಕಿಯ ನೆನಪು' (ಎಡುವರ್ಡೊ ಗೆಲಿಯಾನೋ) ಪ್ರಮುಖ ಅನುವಾದಿತ ಕೃತಿಗಳು.

'ಅಷ್ಟಿಷ್ಟು ಚುಟುಕಾಗಿ ಹೇಳಿದ್ದ,' ನನಗೇನೋ ಸಂಸಾರದ ವ್ಯಥೆ ಗೊತ್ತು ಎಂಬೋ ರೀತಿಯಲ್ಲಿ ಹೇಳಿದೆ.

'ಇಲ್ಲಾ ಸಾರ್, ಅದೇ ಜಾಬಲ್ಲಿದ್ರಲ್ಲಾ ಅಲ್ಲಿಂದ ಡಿಸ್ಮಿಸ್ ಆದ ಮೇಲೆ ತುಂಬಾ ಹಿಂಸೆ ಆಗೋಯ್ತು... ಸಾರ್... ಏನೂ ತಪ್ಪಿಲ್ದೇ ಇದ್ರೂ ಸಿಕ್ಕಾಕೊಂಡು... ತುಂಬಾ ಅವಮಾನ ಆಗೋಯ್ತು ಸಾರ್' ಎಂದಳು.

'ತುಂಬಾ ವರ್ಷ ಆಗೋಯ್ತಲ್ಲ...' ಎಂದೆ ಊಹೆಯಲ್ಲಿ.

'ಹ್ಞೂಂ ಸಾರ್. ಮಕ್ಕಳೆಲ್ಲಾ ಆಗ ಚಿಕ್ಕೋರು. ಆಮೇಲೆ ಹೆಂಗೋ ಜೀವನ ನಡೀತು. ಕೂಲಿ ನಾಲಿ ಏಜೆನ್ಸಿ ಏನೋ ಮಾಡ್ಕೊತಾ...' ಎಂದು ಗಂಟಲು ಸರಿಪಡಿಸಿಕೊಂಡಳು. ಹಳೆ ನೆನಪಷ್ಟೇ ಅಲ್ಲ; ಅದರ ಭಾರ ಈಗಲೂ ಎದೆಯೊಳಗೆ ಕೂತು ಈಗಿನ ಬಾಳನ್ನೇ ಬಾಧಿಸುವ ಬಾಧೆ ಅದು.

'ಫ್ಯಾಕ್ಟರಿನಲ್ಲಿ ಅದೇನೋ ಕನ್ಸೈನ್‌ಮೆಂಟ್ ಕದ್ದು ಮಾರ್ತಿದ್ರು ಅಂತ ಗೂಬೆ ಕೂರಿಸಿದ್ರು ಸಾರ್... ಪೊಲೀಸ್ ಕಂಪ್ಲೇಂಟೂ ಮಾಡಿ ಡಿಸ್‌ಮಿಸ್ ಮಾಡಿದ್ರು ಸಾರ್... ಇವ್ರದ್ದೇನೂ ತಪ್ಪಿರಲಿಲ್ಲ. ಆ ಜನರಲ್ ಮ್ಯಾನೇಜರ್ ಭಾವಮೈದಂಗೆ ಆ ಪೋಸ್ಟ್. ಅವ್ನು ಮಾರ್ಕೊಳ್ಳೋನು. ಅವನ್ನ ಬಚಾವ್ ಮಾಡಿದ್ರು ಸಾರ್... ಇವ್ರು ಅವ್ನ ಕೈ ಕೆಳಗೆ ಇದ್ದೋರು. ಗೂಬೆ ಕೂರ್ಸಿ ಕಿತ್ತಾಕಿದ್ರು...' ಎಂದು ನಿಟ್ಟುಸಿರು ಬಿಟ್ಟಳು.

ನನಗೆ ಏನು ಹೇಳಲೂ ತೋಚಲಿಲ್ಲ.

ಆ ವೇಳೆಗೆ ಮಧು ವಾಪಾಸು ಬಂದ. ಟಿವಿಎಸ್ ನಿಲ್ಲಿಸಿ ಮನೆಯೊಳಗೆ ಬಂದು ಅದೇನೋ ದಿನಸಿ ಇರಬೇಕು, ಅವನ ಹೆಂಡತಿ ಕೈಗೆ ಕೊಟ್ಟು, 'ಕಾಫಿ ಆಯ್ತಾ?' ಎಂದು ಸ್ನೇಹದಲ್ಲಿ ಕೇಳಿದ.

'ಹ್ಞು... ಏನೋ ಮಾತಾಡ್ತಿದ್ವು...' ಎಂದೆ

'ಹೇಳಿರ್ತಾಳೆ ಕತೆ...' ಎಂದ ವಿಷಣ್ಣ ದನಿಯಲ್ಲಿ. ಆಕೆ ಮುಖ ಬಿಗಿ ಮಾಡಿ ಒಳಗೆ ಹೋದಳು.

'ಬಾ ಮತ್ತೆ, ಡ್ರಾಪ್ ಮಾಡ್ತೀನಿ' ಎಂದ

'ಬರ್ಲಮ್ಮಾ,' ಎಂದು ನಾನು ಆಕೆಗೆ ಹೇಳಿದೆ.

'ಬರ್ತಾ ಇರಿ. ಈಗ ಮತ್ತೆ ಪರಿಚಯ ಮಾಡ್ಕೊಂಡ್ರಲ್ಲ...' ಎಂದು ಆಕೆ ಪ್ರೀತಿಯಲ್ಲಿ ಹೇಳಿ, 'ಯಾರೂ ಬರಲ್ಲ ಸಾರ್, ಕುಮಾರ್ ಬರೋರು... ಅವ್ರು ಹೋಗ್‌ಬಿಟ್ರಲ್ಲಾ, ಉಳ್ದೋರು ಯಾರೂ ಈ ಕಡೆ ತಲೆ ಹಾಕಿಲ್ಲ. ಬಂದ್ರೂ ಹಳೇದೇ ಕೆದಕೋದಲ್ವೇ...' ಎಂದು ಆಕೆ ಬಡಬಡ ಹೇಳಿದಳು. ಎಲ್ಲಿ ಬಾಕಿ ಉಳಿದು ಬಿಡುತ್ತೋ ಎಂಬ ಉದ್ವೇಗದಲ್ಲಿ ಆಕೆ ಇದ್ದಿದ್ದು ಗೊತ್ತಾಗ್ತಿತ್ತು.

'ಬರ್ತೀರ್ತೀನಿ. ಈಗ ಇವ್ನ ಮರು ಪರಿಚಯ ಆಯ್ತಲ್ಲ...' ಎಂದೆ ಸಮಾಧಾನಿಸುವ ದನಿಯಲ್ಲಿ.

ಮಧು ನನ್ನನ್ನು ಕೂರಿಸಿಕೊಂಡು ಮನೆ ಕಡೆ ಹೋಗುವ ಬದಲು ಅಲ್ಲೆಲ್ಲೋ ಇದ್ದ ಕೆರೆ ಕಡೆಗೆ ಗಾಡಿ ತಿರುಗಿಸಿದ. ನನಗೂ ಅದು ಅನಿರೀಕ್ಷಿತವಾಗಿರಲಿಲ್ಲ. ಅಷ್ಟಿಷ್ಟು ಅವನ ಹೆಂಡತಿ ಬಿಟ್ಟು ಕೊಟ್ಟ ಮೇಲೆ ಅದರ ಬಾಕಿ ವಿವರ ಹೇಳಬೇಕು ಅಂತ ಅವನಿಗೆ ಅನ್ನಿಸಿರಬಹುದು.

ಕೆರೆಯ ಸಿಮೆಂಟ್ ಬೆಂಚಲ್ಲಿ ಕೂತು ಮಧು ಮೈ ಮುರಿದ.

'ಮತ್ತೆ, ನಿನ್ ಕತೆ ಏನು? ಊರಲ್ಲಿದ್ಯಂತೆ...? ಈ ಕಡೆ ಮತ್ತೆ ಯಾಕೆ ಬಂದೆ?' ಎಂದ ಪುಟ್ಟ ಕಲ್ಲುಗಳನ್ನು ನೀರಿಗೆಸೆಯುತ್ತಾ.

'ಇರುತ್ತಲ್ಲಪ್ಪಾ, ಏಗೋಕಾಗದೇ ಹೊರಡೋದು, ಹೊಸದೇನೋ ಸಾಧಿಸೋಕೆ ಅಂತ ಅಲ್ಲ, ಹೊಟ್ಟೆ ಹೊರೆಯೋಕೆ' ಅಂದೆ.

'ಮತ್ತೆ ಬರೀತಿರ್ತೀಯಲ್ಲ, ಓದ್ತಿರ್ತೀನಿ... ನಿನ್ನಂತೋನು ಹೊಟ್ಟೆ ಹೊರೆಯೋಕೆ ಅಂದ್ರೆ